ಬಂದಿದ್ದ ಅನಂತನಾಗ್ ಮತ್ತು ಲಕ್ಷ್ಮೀ ಅವರು ಸೀದಾ ಗುಡಿ ಹಿಂದ ಸಾಲಿ ಬಯಲಾಗ ಹಾಕಿದ್ದ ಸ್ಟೇಜ್ ಮ್ಯಾಲ ಭಾಷಣಾ ಮಾಡಕ ಮ್ಯಾಲ ಹತ್ತಿದರು,

ಸ್ವತಃ ದೇವಾನು ದೇವತೆಗಳೇ ಧರೆಗಿಳಿದು ಬಂದಿದ್ದಾರೆ, ಅವರನ್ನು ನೋಡಬೇಕೆಂದು ಜನಾ ಲಗ್ನಾ, ಅಕ್ಕಿಕಾಳು ಮರೆತು ಓಡತೊಡಗಿದರು, ಹೀಂಗ ಓಡಿದಾಗ ಇಡೀ ಕಲ್ಯಾಣ ಮಂಟಪ ಅಲ್ಲಿ ಖಾಲಿ ಆಗಿ, ಇಲ್ಲಿ ಭರ್ಜರಿಯಾಗಿ ತುಂಬಿಕೊಂಡಿತು. ನೋಡನೋಡುತ್ತಿದ್ದಂತೆ ಕಲ್ಯಾಣ ಮಂಟಪದಿಂದ ಅಭಿಮಾನಿಗಳು ಕರಗಿ ಹೋಗಿದ್ದರು. ಎಣಿಸಿದರ ಇಪ್ಪತ್ತ ಮಂದಿ ಇರಲಿಲ್ಲ. ಮುಹೂರ್ತ ಮೀರಿ ಹೊಂಟಿತ್ತು. ಭಡಜಿ ಹ್ಯಾಂಗ ಮಾಡುನು ಅಂತಾ ಧಣೇರನ್ನು ಮತ್ತು ಬೀಗರನ್ನು ಕೇಳಿದರು. ಇಲ್ಲಾ ಮುಹೂರ್ತ ತಪ್ಪಸುದು ಬ್ಯಾಡ ಮುಗಿಸಿಬಿಡ್ರಿ ಅಂದಾಗ, ಕುಟುಂಬ ವರ್ಗದವರ ಇಪ್ಪತ್ತು ಇಪ್ಪತ್ತೈದು ಜನರ ಸಮ್ಮುಖದಲ್ಲಿ ಅಕ್ಕಿಕಾಳು ಬಿದ್ದು, ಮಾಂಗಲ್ಯ ಶಾಸ್ತ್ರ ಮುಗಿದು ಹೋಯ್ತು.

ಅನಂತನಾಗ್, ಲಕ್ಷ್ಮೀ ಅವರು ಚುನಾವಣಾ ಪ್ರಚಾರದ ಭಾಷಣ ಮಾಡಿ, ಪ್ರೇಕ್ಷಕರ ಒತ್ತಾಯಕ್ಕ ಒಂದ ಎರಡ ಹಾಡ ಹೇಳಿ ಮುಂದ ಲೋಕಾಪೂರಕ್ಕ ಹ್ವಾದ್ರು. ಇತ್ತ ಹಸಿದ ಜನ ಮಂಟಪಕ್ಕ ಹೋಗಲಾರ್ದ ಊಟದ ಮನೆ ಕಡೆ ಹೋಗಿ ಭಾರಿ ಭರ್ಜರಿ ಊಟಾ ಮಾಡಿದರು. ಸಾವಿರಾರು ಜನಾ ಇದ್ರೂ ಧಣೇರ ಮಗನ ಲಗ್ನದ ಅಕ್ಕಿಕಾಳಿನ ಹೊತ್ತಿಗೆ ಇಪ್ಪತ್ತು ಮಂದಿ ಇದ್ದದ್ದು ಒಂದ ನೆನಪಾಗಿ ಉಳೀತು.

★★★

